

بسم اللہِ الرّحمٰن الرّحیم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **26–11–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಉಮರ್(ರ)ರ ದರ್ಬಾರಿನಲ್ಲಿ ಪವಿತ್ರ ಖುರ್‌ಆನಿನ ಅರಿವುಳ್ಳವರಿಗೆ ಉನ್ನತ ಸ್ಥಾನವಿತ್ತು. ಅವರು ಹಿರಿವಯಸ್ಸಿನವರಾಗಿದ್ದರೂ ಯುವಕರಾಗಿದ್ದರೂ ಸರಿ. ಹಝ್ರತ್ ಉಮರ್(ರ) ತನ್ನ ಸಮೀಪದಲ್ಲಿ ಇರಿಸುತ್ತಿದ್ದವರಲ್ಲಿ ಹುರ್ ಬಿನ್ ಖೈಸ್ ಒಬ್ಬರಾಗಿದ್ದರು. ಐನಿಯ ಬಿನ್ ಹಸನ್ ಬಿನ್ ಹುಧೈಫ ತನ್ನ ಸಹೋದರನ ಮಗನಾದ ಹುರ್ರ್ ಬಿನ್ ಖೈಸ್‌ರ ಶಿಫಾರಸ್ಸಿನ ಮೇರೆಗೆ ಹಝ್ರತ್ ಉಮರ್(ರ)ರ ಸನ್ನಿಧಿಯಲ್ಲಿ ಬಂದು, **'ನೀವು ನ್ಯಾಯಪೂರ್ಣವಾಗಿ ನಮಗೆ ಸಂಪತ್ತು ನೀಡುತ್ತಿಲ್ಲ'** ಎಂದು ಹೇಳಿದನು. ಹಝ್ರತ್ ಉಮರ್(ರ) ಕೋಪಗೊಂಡು ಅವನೊಡನೆ ಏನೋ ಹೇಳಲು ಹೋಗುವಷ್ಟರಲ್ಲಿ ಹುರ್ರ್ ಬಿನ್ ಖೈಸ್ ತಕ್ಷಣವೇ ಹಝ್ರತ್ ಉಮರ್(ರ)ರೊಡನೆ ಹೀಗೆ ಹೇಳಿದರು: ಅಲ್ಲಾಹನು ತನ್ನ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಡನೆ **"ಖುಧಿಲ್ ಅಫ್ವ ವಅ್‌ಮುರ್ ಬಿಲ್‌ಮಅ್‌ರೂಫಿ ವ ಅಅ್‌ರಿಝ್ ಅನಿಲ್ ಜಾಹಿಲೀನ್"** ಎಂದು ಹೇಳಿರುವನು. ಎಂದರೆ, ಸದಾ ಕ್ಷಮಾಶೀಲನಾಗು. ಒಳಿತನ್ನು ಉಪದೇಶಿಸು ಮತ್ತು ಅವಿವೇಕಿಗಳಿಂದ ದೂರಸರಿ. ಈ ಐನಿಯ ತಿಳಿಗೇಡಿಯೇ ಆಗಿರುವರು. ಆಗ ಹಝ್ರತ್ ಉಮರ್(ರ) ಸುಮ್ಮನಾದರು. ಪವಿತ್ರ ಖುರ್‌ಆನಿನ ವಚನವನ್ನು ಕೇಳಿದರೆ ಹಝ್ರತ್ ಉಮರ್(ರ) ತಡೆದು ನಿಲ್ಲುತಿದ್ದರು ಮತ್ತು ಅದರ ಪ್ರಕಾರ ನಡೆಯುತ್ತಿದ್ದರು.

ಈ ಸಂಬಂಧವಾಗಿ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಹೇಳುತ್ತಾರೆ: ಒಬ್ಬ ಅಧಿಕಾರಿಗೆ ಶಿಕ್ಷೆ ಕೊಡಲಿಕ್ಕಾಗಿ ಹಝ್ರತ್ ಉಮರ್(ರ) ಗಲ್ಲಿಗೇರಿಸುವವನನ್ನು ಕರೆದರು. ಆಗ ಒಬ್ಬ ಹುಡುಗ **'ವಲ್‌ಕಾಝಿಮೀನಲ್ ಗೈಝ್ ವ ಅಅ್‌ರಿಝ್ ಅನಿಲ್ ಜಾಹಿಲೀನ್'** ಎಂಬ ಪವಿತ್ರ ಖುರ್‌ಆನಿನ ಆಯತನ್ನು ಓದಿ ಹೇಳಿದನು. **ಹಾದಾ ಮಿನಲ್ ಜಾಹಿಲೀನ್** ಆ ವ್ಯಕ್ತಿ ಅವಿವೇಕಿಯಾಗಿರುವನು ಎಂದು ಸಹ ಹೇಳಿದನು. ಹಝ್ರತ್ ಉಮರ್(ರ)ರ ಕೋಪ ತಣ್ಣಗಾಯಿತು ಮತ್ತು ಅವರು ಸುಮ್ಮನಾದರು. ಮಕ್ಕಳ ಧಾರ್ಮಿಕ ತರಬೇತಿ ಮತ್ತು ಅವರ ಬುದ್ಧಿಯನ್ನು ತೀಕ್ಷ್ಣಗೊಳಿಸುವ ಸಲುವಾಗಿ ಹಝ್ರತ್ ಉಮರ್(ರ) ಮಕ್ಕಳನ್ನು ಕೂಡ ತನ್ನ ದರ್ಬಾರಿಗೆ ಕರೆಯುತ್ತಿದ್ದರು ಮತ್ತು ಅವರಿಂದಲೂ ಸಲಹೆ ಪಡೆಯುತ್ತಿದ್ದರು.

ಹಝ್ರತ್ ಉಮರ್(ರ) ಬೈತುಲ್ ಮಾಲಿನ ಸಂಪತ್ತಿನ ಸಂರಕ್ಷಣೆ ಮತ್ತು ಮೇಲ್ನೋಟದ ಕಾರ್ಯದಲ್ಲಿ ಬಹಳ ಎಚ್ಚರಿಕೆ ವಹಿಸುತ್ತಿದ್ದರು. ಒಮ್ಮೆ ಹಝ್ರತ್ ಉಮರ್(ರ)ರಿಗೆ ಯಾರೋ ಒಬ್ಬರು ಒಂದು ಲೋಟ ಹಾಲನ್ನು ಕೊಟ್ಟರು. ಅವರು ಅದನ್ನು ಕುಡಿದರು ಮತ್ತು ಅದು ಎಲ್ಲಿಂದ ಬಂದಿತು ಎಂದು ಕೇಳಿದರು. ಅದು ಝಕಾತಿನ ಒಂಟೆಗಳದ್ದಾಗಿದೆ ಎಂದು ಅವರೊಡನೆ ಹೇಳಲಾಯಿತು. ಝಕಾತಿನ ಸಂಪತ್ತಿನಿಂದ ಕುಡಿಯುವುದನ್ನು ನಿರಾಕರಿಸಿಕೊಂಡು ಹಝ್ರತ್ ಉಮರ್(ರ) ತನ್ನ ಕೈಯನ್ನು ಕಂಠಕ್ಕೆ ಹಾಕಿ ಹಾಲನ್ನು ವಾಂತಿ ಮಾಡಿದರು.

ಒಂದು ಬಾರಿ ಹಝ್ರತ್ ಉಮರ್(ರ) ರೋಗಿಯಾದಾಗ ಜೇನುತುಪ್ಪ ಸೇವಿಸಲು ಸಲಹೆ ಕೊಡಲಾಯಿತು. ಬೈತುಲ್ ಮಾಲಿನಲ್ಲಿ ಜೇನುತುಪ್ಪವಿತ್ತು. ಆದರೆ ಜನರ ಅನುಮತಿ ಇಲ್ಲದೇ ಅದನ್ನು ಉಪಯೋಗಿಸುವುದನ್ನು ನಿಷಿದ್ಧವೆಂದು ಹಝ್ರತ್ ಉಮರ್(ರ) ಹೇಳಿದರು. ಒಮ್ಮೆ ಹಿಂದೆ ಉಳಿದ ಎರಡು ಒಂಟೆಗಳು ಅತ್ತಿತ್ತ ಹೋಗಿ ಕಾಣೆಯಾಗದಿರಲಿಕ್ಕಾಗಿ ಅವುಗಳನ್ನು ಸ್ವತಃ ಅಟ್ಟುತ್ತಾ ಮಧ್ಯಾಹ್ನದ ಕಠಿಣ ಬಿಸಿಲಿನಲ್ಲಿ ಹಝ್ರತ್ ಉಮರ್(ರ) ಹೋಗುತ್ತಿದ್ದರು. ಹಝ್ರತ್ ಉಸ್ಮಾನ್(ರ)ರೊಡನೆ ಅವರು ಹೀಗೆ ಹೇಳಿದರು: ಇದು ನನ್ನ ಕೆಲಸವಾಗಿದೆ. ಇದನ್ನು ನಾನೇ ಮಾಡುವೆನು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಅಲ್ಲಾಹನು ಮುಸ್ಲಿಮರಿಗೆ ಸಂಪತ್ತು, ಗೌರವ, ಉನ್ನತ ಸ್ಥಾನವನ್ನು ನೀಡಿದನು. ಆದರೆ ಅವರು ಇಸ್ಲಾಮಿಕ ಪಾಠಗಳನ್ನು ಮರೆತುಬಿಡಲಿಲ್ಲ. ಅಸಡ್ಡೆ ತೋರಿಸಿರಲಿಲ್ಲ. ಸಈದ್ ಬಿನ್ ಮುಸಯ್ಯಬ್ ವರದಿ ಮಾಡುತ್ತಾರೆ: ಒಬ್ಬ ಯಹೂದಿ ಮತ್ತು ಒಬ್ಬ ಮುಸ್ಲಿಮನ ನಡುವೆ ಜಗಳ ಉಂಟಾದಾಗ, ಯಹೂದಿಯ ಕಡೆ ನ್ಯಾಯವಿದ್ದ ಕಾರಣದಿಂದ ಹಝ್ರತ್ ಉಮರ್(ರ) ಯಹೂದಿಯ ಪರವಾಗಿ ತೀರ್ಪು ನೀಡಿದರು. ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ: ಈಜಿಪ್ಟಿನ ಒಬ್ಬ ವ್ಯಕ್ತಿಯು ಹಝ್ರತ್ ಅಮ್ರ್ ಬಿನ್ ಆಸ್‌ರ ಮಗನೊಂದಿಗೆ ಓಟದ ಸ್ಪರ್ಧೆಯಲ್ಲಿ ಮುಂದೆ ಬಂದಾಗ ಅವನನ್ನು ಚಾವಟಿಯಿಂದ ಹೊಡೆದನು. ಆಗ ಹಝ್ರತ್ ಉಮರ್(ರ) ಈಜಿಪ್ಟಿನ ಅದೇ ವ್ಯಕ್ತಿಯ ಕೈಯಿಂದಲೇ ಹಝ್ರತ್ ಅಮ್ರ್ ಬಿನ್ ಆಸ್‌ರ ಮಗನಿಗೆ ಚಾವಟಿಯೇಟು ಕೊಡಿಸಿದರು.

ಒಮ್ಮೆ ಒಬ್ಬ ವ್ಯಕ್ತಿ ಹಝ್ರತ್ ಉಮರ್(ರ)ರೊಡನೆ ಹೀಗೆ ಹೇಳಿದನು: ನಾವು ನಿಮ್ಮಲ್ಲಿ ಏನಾದರೂ ವಕ್ರತೆಯನ್ನು ಕಂಡರೆ ಅದನ್ನು ನಾವು ನಮ್ಮ ಖಡ್ಗಗಳಿಂದ ನೇರವಾಗಿಸುವೆವು. ಹಝ್ರತ್ ಉಮರ್(ರ) ಹೇಳಿದರು: ಇಂತಹ ವ್ಯಕ್ತಿ ಕೂಡ

ಈ ಸಮುದಾಯದಲ್ಲಿ ಇದೆ ಎಂಬುದಕ್ಕೆ ನಾನು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತೇನೆ. ಒಂದು ಸಂದರ್ಭದಲ್ಲಿ ಹಝ್ರತ್ ಉಮರ್(ರ) ಹೇಳಿದರು: ನನ್ನ ನ್ಯೂನತೆಗಳ ಕುರಿತು ನನಗೆ ತಿಳಿಸಿಕೊಡುವವನು ನನಗೆ ಅತ್ಯಂತ ಪ್ರಿಯಕರ ವ್ಯಕ್ತಿಯಾಗಿರುವನು. ಹಝ್ರತ್ ಉಮರ್(ರ)ರ ಒಂದು ಹೇಳಿಕೆಯ ಬಗ್ಗೆ ಹೀಗೆ ಪ್ರಸ್ತಾಪಿಸಲಾಗಿದೆ: ನಾನು ತಪ್ಪು ಮಾಡಿದರೂ ನನ್ನ ಮೇಲೆ ಇರುವ ಹೆದರಿಕೆ ಕಾರಣದಿಂದ ಜನರು ನನಗೆ ಸರಿಯಾದ ಮಾರ್ಗವನ್ನು ತೋರಿಸದೇ ಇರುವುದರ ಬಗ್ಗೆ ನಾನು ಭಯಪಡುತ್ತೇನೆ.

ಒಂದು ದಿನ ಹಝ್ರತ್ ಉಮರ್(ರ)ರ ಬಳಿಗೆ ಒಬ್ಬ ವ್ಯಕ್ತಿ ಬಂದು ಸಾರ್ವಜನಿಕರ ಮುಂದೆ ಹೀಗೆ ಹೇಳಿದನು: ಹೇ ಉಮರ್, ಅಲ್ಲಾಹನಿಗೆ ಹೆದರು, ಕೆಲವರು ಅವನ ಮಾತನ್ನು ಕೇಳಿ ತೀವ್ರ ಕೋಪಗೊಂಡರು ಮತ್ತು ಅವನನ್ನು ಸುಮ್ಮನಾಗಿಸಲು ಬಯಸಿದರು. ಆಗ ಹಝ್ರತ್ ಉಮರ್(ರ) ಅವನೊಡನೆ ಹೇಳಿದರು: ನನ್ನ ತಪ್ಪುಗಳನ್ನು ನೀನು ಹೇಳದೇ ಇದ್ದರೆ ನಿನ್ನಲ್ಲಿ ಯಾವುದೇ ಒಳಿತಿಲ್ಲ. ನೀನು ಹೇಳುವುದನ್ನು ನಾವು ಕೇಳದೇ ಇದ್ದರೆ, ನಮ್ಮಲ್ಲೂ ಯಾವುದೇ ಒಳಿತಿಲ್ಲ. ಕೇವಲ ಹೀಗೆ ಮಾತನಾಡಬೇಡ. ಬದಲಾಗಿ, ಯಾವ ಸಂಗತಿಯ ಬಗ್ಗೆ ಹೇಳಲು ಬಯಸುತ್ತಿದ್ದೀಯ ಎಂದು ನಿಖರವಾಗಿ ಮತ್ತು ಸ್ಪಷ್ಟವಾಗಿ ಹೇಳು ಎಂದು ಆ ವ್ಯಕ್ತಿಯೊಡನೆ ಹೇಳಿದರು.

ಧಾರ್ಮಿಕ ವಿಷಯಗಳಲ್ಲಿ ಇಸ್ಲಾಮಿನ ಅಧ್ಯಾಪನೆಯ ಬಗ್ಗೆಯೂ ಹಝ್ರತ್ ಉಮರ್(ರ) ಬಹಳವಾಗಿ ಶ್ರದ್ಧೆವಹಿಸುತ್ತಿದ್ದರು. ಅಲೆಕ್ಸಾಂಡ್ರಿಯದ ಮೇಲೆ ವಿಜಯ ಸಾಧಿಸಿದ ಬಳಿಕ ಯುದ್ಧಕೈದಿಗಳಿಗೆ ಇಷ್ಟಪಡುವ ಧರ್ಮದ ಆಯ್ಕೆ ಮಾಡಲು ಸಂಪೂರ್ಣವಾದ ಸ್ವಾತಂತ್ರ್ಯ ನೀಡಿದರು. ಅವರು ಇಸ್ಲಾಂ ಸ್ವೀಕರಿಸಿದರೆ ಅವರ ಹಕ್ಕುಗಳು ಮತ್ತು ಕರ್ತವ್ಯಗಳು ಮುಸ್ಲಿಮರಂತೆಯೇ ಆಗಿರುವುವು ಮತ್ತು ತಮ್ಮ ಧರ್ಮದಲ್ಲಿ ನೆಲೆನಿಲ್ಲುವವರ ಮೇಲೆ ತೆರಿಗೆ ನಿಶ್ಚಯಿಸಲಾಗುವುದು ಎಂದು ಹೇಳಲಾಯಿತು. ಆಗ ಅನೇಕ ಬಂಧಿಗಳು ಮುಸ್ಲಿಮರಾದರು.

ಮರಣಾಸನ್ನಳಾದ ಒಬ್ಬಳು ಮುದುಕಿ ನಿರ್ಗತಿಕ ಕ್ರೈಸ್ತ ಮಹಿಳೆಗೆ ಇಸ್ಲಾಂ ಸ್ವೀಕರಿಸಲು ಹಝ್ರತ್ ಉಮರ್(ರ) ಹೇಳಿದರು. ಆದರೆ ಅವಳ ನಿಸ್ಸಹಾಯಕಾವಸ್ಥೆಯಿಂದ ಪ್ರಯೋಜನ ಪಡೆಯುತ್ತಾ ನಾನು ಅವಳನ್ನು ಮುಸ್ಲಿಮಳಾಗಿಸುತ್ತಿದ್ದೇನೋ ಎಂಬ ಭಯದಿಂದ ಹಝ್ರತ್ ಉಮರ್(ರ) ಅನಂತರ ಅಲ್ಲಾಹನಲ್ಲಿ ಪಶ್ಚಾತ್ತಾಪ ಮಾಡಿದರು. ಒಬ್ಬ ಕ್ರೈಸ್ತ ಗುಲಾಮನಾದ ಅಶಕ್‌ನೊಡನೆ ಮುಸ್ಲಿಮನಾಗಲು ಹಝ್ರತ್ ಉಮರ್(ರ) ಹೇಳಿದಾಗ ಅವನು ನಿರಾಕರಿಸಿದನು. ಆಗ ಹಝ್ರತ್ ಉಮರ್(ರ) ಹೇಳಿದರು: **ಲಾ ಇಕ್ರಾಹ ಫಿದ್ದೀನ್** ಎಂದರೆ ಇಸ್ಲಾಂ ಧರ್ಮದಲ್ಲಿ ಒತ್ತಾಯವಿಲ್ಲ. ತನ್ನ ಮರಣ ಸಮೀಪವಾದಾಗ ಹಝ್ರತ್ ಉಮರ್(ರ) ಅವನನ್ನು ಸ್ವತಂತ್ರಗೊಳಿಸಿದರು. ಹಝ್ರತ್ ಉಮರ್(ರ) ಮೃಗಗಳೊಂದಿಗೆ ಕೂಡ ಬಹಳ ದಯೆ ತೋರಿಸುತ್ತಿದ್ದರು. ಒಂದು ಒಂಟೆಯ ಬೆನ್ನಲ್ಲಿ ಗಾಯವನ್ನು ಕಂಡಾಗ ಹಝ್ರತ್ ಉಮರ್(ರ) ಹೀಗೆ ಹೇಳಿದರು: ನಿನ್ನ ಬಗ್ಗೆ ಅಲ್ಲಾಹನು ನನ್ನೊಡನೆ ಪ್ರಶ್ನಿಸುವನೋ ಎಂದು ನನಗೆ ಭಯವಿದೆ. ಒಮ್ಮೆ ಒಬ್ಬ ಗುಲಾಮನು ಒಂದು ಸವಾರಿಮೃಗವನ್ನು ನಾಲ್ಕು ಮೈಲುಗಳಷ್ಟು ದೂರ ಓಡಿಸಿ ಮೀನನ್ನು ಖರೀದಿ ಮಾಡಿ ತಂದಾಗ ಹಝ್ರತ್ ಉಮರ್(ರ) ಸವಾರಿಮೃಗದ ಬೆವರನ್ನು ಕಂಡು, **"ನನಗಾಗಿ ಒಂದು ಜಾನುವಾರಿಗೆ ತೊಂದರೆ ಕೊಟ್ಟಿದ್ದೀಯ"** ಎಂದು ಹೇಳಿಕೊಂಡು ಮೀನು ತಿನ್ನುವುದನ್ನು ನಿರಾಕರಿಸಿದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಉಮರ್(ರ)ರೊಡನೆ ಒಬ್ಬ ಯಹೂದಿ ಹೇಳಿದನು – ಪವಿತ್ರ ಖುರ್‌ಆನಿನಲ್ಲಿ ಒಂದು ವಚನವಿದೆ. ಅದು ನಮ್ಮ ಗ್ರಂಥದಲ್ಲಿ ಅವತೀರ್ಣವಾಗಿದ್ದರೆ ನಾವು ಆ ದಿನದಂದು ಹಬ್ಬವನ್ನು ಆಚರಿಸುತ್ತಿದ್ದೆವು. ಅದು ಯಾವ ವಚನವೆಂದು ಹಝ್ರತ್ ಉಮರ್(ರ) ಕೇಳಿದರು. ಅವನು ಹೇಳಿದನು: **ಅಲ್‌ಯೌಮ ಅಕ್‌ಮಲ್‌ತು ಲಕುಂ ದೀನಕುಂ**. ಆಗ ಹಝ್ರತ್ ಉಮರ್(ರ) ಹೇಳಿದರು: ಆ ದಿನ ನಮಗೆ ಎರಡು ಹಬ್ಬಗಳ ದಿನವಾಗಿದೆ. ಎಂದರೆ ಅರಫಾದ ದಿನ ಮತ್ತು ಜುಮಾ ದಿವಸದಂದು ಈ ವಚನ ಅವತೀರ್ಣವಾಗಿತ್ತು.

ಕೆಲವು ಹಿರಿಯರು ಹೀಗೆ ಹೇಳುತ್ತಾರೆ: ಜನರು ಯಾವುದಾದರೂ ವಿಷಯದಲ್ಲಿ ಭಿನ್ನಾಭಿಪ್ರಾಯ ಹೊಂದುವರಾದರೆ, ಹಝ್ರತ್ ಉಮರ್(ರ) ಈ ಸಮಸ್ಯೆಗೆ ಏನು ಪರಿಹಾರ ಮಾಡಿದ್ದರು ಎಂದು ನೋಡಿರಿ. ಏಕೆಂದರೆ ಹಝ್ರತ್ ಉಮರ್(ರ) ಸಮಾಲೋಚನೆ ನಡೆಸದೇ ಯಾವುದೇ ಕೆಲಸವನ್ನು ಮಾಡುತ್ತಿರಲಿಲ್ಲ. ಹಝ್ರತ್ ಖುಬೈಸ ಬಿನ್ ಜಾಬಿರ್ ಹೇಳುತ್ತಾರೆ: ಹಝ್ರತ್ ಉಮರ್(ರ)ಗಿಂತ ಹೆಚ್ಚು ಪವಿತ್ರ ಖುರ್‌ಆನ್ ಓದುವ, ಧಾರ್ಮಿಕ ಅರಿವು ಇರುವ ಮತ್ತು ಇಸ್ಲಾಮಿಕ ಪಾಠಗಳನ್ನು ಹೇಳಿಕೊಡುವ ಬೇರೆ ಯಾರನ್ನೂ ನಾನು ಕಂಡಿಲ್ಲ. ಹಝ್ರತ್ ಹಸನ್ ಬಸರೀ ಹೇಳುತ್ತಾರೆ: ನೀವು ನಿಮ್ಮ ಸಭೆಯನ್ನು ಸುಗಂಧಭರಿತವನ್ನಾಗಿ ಮಾಡಲು ಬಯಸುವಿರಾದರೆ ಹಝ್ರತ್ ಉಮರ್(ರ)ರ ಪ್ರಸ್ತಾಪವನ್ನು ಹೆಚ್ಚಾಗಿ ಮಾಡಿರಿ. ಮುಜಾಹಿದ್ ವರದಿ ಮಾಡುತ್ತಾರೆ: ಹಝ್ರತ್ ಉಮರ್(ರ)ರ ಕಾಲದಲ್ಲಿ ಶೈತಾನ್‌ಗಳನ್ನು ಕಟ್ಟಿಡಲಾಗಿತ್ತು, ಹಝ್ರತ್ ಉಮರ್(ರ) ಶಹೀದ್ ಆದಾಗ ಶೈತಾನ್‌ಗಳು ಜಿಗಿಯಲು ಶುರುಮಾಡಿದುವು. (ಎಂದರೆ, ಕುತಂತ್ರಗಳು ಮತ್ತು ತಪ್ಪಾದ ಕೆಲಸಗಳು ಆ ಕಾಲಘಟ್ಟದಲ್ಲಿ ನಡೆಯುತ್ತಿರಲಿಲ್ಲ.)

ಅಲಿ ಮುಹಮ್ಮದ್ ಸಲಾಬಿ ಬರೆಯುತ್ತಾರೆ: ಇಸ್ಲಾಮಿನ ವೈಶಿಷ್ಟ್ಯಗಳನ್ನು ಪ್ರತಿಬಿಂಬಿಸುವ ಕವಿತೆಗಳನ್ನು ಹಝ್ರತ್ ಉಮರ್(ರ) ಇಷ್ಟಪಡುತ್ತಿದ್ದರು. ಪ್ರೇಮಗೀತೆಗಳಲ್ಲಿ ಸಭ್ಯ ಮಹಿಳೆಯರ ಹೆಸರನ್ನು ಪ್ರತಿಪಾದಿಸುವ ಸಂಪ್ರದಾಯವನ್ನು ಹಝ್ರತ್ ಉಮರ್(ರ) ಅಳಿಸಿಹಾಕಿದರು ಮತ್ತು ಅದಕ್ಕೆ ಕಠಿಣ ಶಿಕ್ಷೆಯನ್ನು ನಿಶ್ಚಯಿಸಿದರು.

ಹಝ್ರತ್ ಉಮರ್(ರ)ರ ಶ್ರೇಷ್ಠತೆ ಮತ್ತು ಉನ್ನತ ಸ್ಥಾನದ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಭವಿಷ್ಯ ನುಡಿಯಲ್ಪಟ್ಟ ಘಟನೆಗಳಲ್ಲಿ ಕೆಲವನ್ನು

ಒಂದೇ ಬಾರಿ ಪ್ರಕಟವಾಗುವ ಪ್ರತೀಕ್ಷೆಯಿರಿಸಲಾಗಿದೆ. ಅವು ತಡವಾಗಿ ಅಥವಾ ಬೇರೆ ವ್ಯಕ್ತಿಯ ಮೂಲಕ ಪ್ರಕಟವಾಗಿದ್ದುವು. ಉದಾಹರಣೆಗೆ, ರೋಮ್ ಮತ್ತು ಇರಾನಿನ ಭಂಡಾರಗಳ ಕೀಲಿಗೈ ಹಝ್‌ರತ್ ಪೈಗಂಬರ್(ಸ)ರ ಕೈಯಲ್ಲಿ ಇರಿಸಲಾಗಿರುವುದಾಗಿ ಹಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಭವಿಷ್ಯವಾಣಿಯಿದೆ. ಆದರೆ ಈ ಭವಿಷ್ಯವಾಣಿ ಈಡೇರುವುದಕ್ಕೆ ಮುಂಚಿತವಾಗಿಯೇ ಹಝ್‌ರತ್ ಪೈಗಂಬರ್(ಸ) ನಿಧನರಾದರು. ರೋಮಿನ ಮತ್ತು ಇರಾನಿನ ಖಜಾನೆಯನ್ನೋ ಕೀಲಿಗೈಯನ್ನೋ ಹಝ್‌ರತ್ ಪೈಗಂಬರ್(ಸ) ನೋಡಿ ಸಹ ಇರಲಿಲ್ಲ. ಏಕೆಂದರೆ ಆ ಕೀಲಿಗೈಗಳು ಹಝ್‌ರತ್ ಉಮರ್(ರ)ರಿಗೆ ಲಭಿಸುವುವು ಎಂದು ವಿಧಿಸಲಾಗಿತ್ತು. ಹಝ್‌ರತ್ ಉಮರ್(ರ)ರ ಅಸ್ತಿತ್ವ ನೆರಳಿನ ರೂಪದಲ್ಲಿ ಹಝ್‌ರತ್ ಪೈಗಂಬರ್(ಸ)ರ ಅಸ್ತಿತ್ವದ ಹಾಗೆಯೇ ಆಗಿತ್ತು. ಆದ್ದರಿಂದ ದಿವ್ಯಭಾಷೆಯಲ್ಲಿ ಹಝ್‌ರತ್ ಉಮರ್(ರ)ರ ಕೈಯನ್ನು ಹಝ್‌ರತ್ ಪೈಗಂಬರ್(ಸ)ರ ಕೈಯೆಂದು ಹೇಳಲಾಯಿತು.

ಹಝ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಲ್ಲಾಹನು ಹಝ್‌ರತ್ ಅಬೂಬಕರ್, ಹಝ್‌ರತ್ ಉಮರ್(ರ) ಮತ್ತು ದುನ್ನೂರೈನ್ ಹಝ್‌ರತ್ ಉಸ್ಮಾನ್(ರ)ರನ್ನು ಇಸ್ಲಾಮಿನ ಬಾಗಿಲುಗಳನ್ನಾಗಿ ಮತ್ತು ಸೃಷ್ಟಿಗಳಲ್ಲಿ ಶ್ರೇಷ್ಠರಾದ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸೈನ್ಯದ ಸೇನಾಧಿಪತಿಗಳನ್ನಾಗಿ ಮಾಡಲಾಗಿದೆ. ಆದ್ದರಿಂದ ಯಾರು ಅವರ ಶ್ರೇಷ್ಠತೆಯನ್ನು ನಿರಾಕರಿಸುತ್ತಾರೋ ಅವರ ದುರ್ಗತಿ ಬಗ್ಗೆ ಮತ್ತು ಅವರು ಅವಿಶ್ವಾಸಿಗಳಾಗುವರೋ ಎಂಬ ಬಗ್ಗೆ ನನಗೆ ಭಯವಿದೆ. ನಾಲ್ವರು ಖಲೀಫರು ನಿಸ್ಸಂಶಯವಾಗಿಯೂ ಪ್ರವಾದಿ ಶ್ರೇಷ್ಠರಾದ ಹಝ್‌ರತ್ ಪೈಗಂಬರ್(ಸ)ರ ಅನುಸರಣೆಯಲ್ಲಿ ಉನ್ನತ ಸ್ಥಾನವನ್ನು ಹೊಂದಿದ್ದರು. ಬೇರೆ ಯಾರಿಗೂ ಕೊಡದಂತಹದ್ದನ್ನು ಅಲ್ಲಾಹನು ಅವರಿಗೆ ದಯಪಾಲಿಸಿದ್ದನು.

ಹಝ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಲಿ ಮುರ್ತಝಾ(ರ) ಅಥವಾ ಫಾತಿಮತುಝ್ಝುಹ್ರಾ(ರ)ರ ಹಕ್ಕನ್ನು, ಅಬೂಬಕರ್ ಸಿದ್ದೀಖ್(ರ) ಅಥವಾ ಉಮರ್ ಫಾರೂಖ್(ರ) ಅಪಹರಿಸಿದ್ದಾರೆ ಮತ್ತು ಅವರ ಮೇಲೆ ದೌರ್ಜನ್ಯವನ್ನು ಮಾಡಿರುವರು ಎಂದು ಶಿಯಾ ಪಂಗಡದವರಲ್ಲಿ ಯಾವನಾದರೂ ಭಾವಿಸುವನಾದರೆ, ಅವನು ನ್ಯಾಯವನ್ನು ಕೈಬಿಟ್ಟಿರುವನು, ಅವನು ಅತಿರೇಕವನ್ನು ಇಷ್ಟಪಟ್ಟಿರುವನು ಮತ್ತು ದೌರ್ಜನ್ಯಗಾರರ ಮಾರ್ಗವನ್ನು ಕೈಗೊಂಡಿರುವನು. ಸತ್ಯವೇನೆಂದರೆ, ಅಬೂಬಕರ್ ಸಿದ್ದೀಖ್(ರ) ಮತ್ತು ಉಮರ್ ಫಾರೂಖ್(ರ) ಇಬ್ಬರೂ ಇತರರ ಹಕ್ಕುಗಳನ್ನು ನೀಡುವ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಎಂದಿಗೂ ಆಲಸಿಗರಾಗಿರಲಿಲ್ಲ. (ಕುಂದುಂಟು ಮಾಡಿರಲಿಲ್ಲ). ಅವರು ದೇವಭಕ್ತಿಯನ್ನು ತಮ್ಮ ಮಾರ್ಗವನ್ನಾಗಿಯೂ ನೀತಿಯನ್ನು ತಮ್ಮ ಗುರಿಯನ್ನಾಗಿಯೂ ಮಾಡಿದ್ದರು ಹಾಗೂ ತಮ್ಮ ಆತ್ಮಗಳನ್ನು ಅಲ್ಲಾಹನ ಅನುಸರಣೆಯಲ್ಲಿ ಸಮರ್ಪಿಸಿದ್ದರು. ಅನುಗ್ರಹಗಳ ಆಧಿಕ್ಯದಲ್ಲೂ ಇಹಪರ ಲೋಕಗಳ ಪ್ರವಾದಿಯಾದ ಹಝ್‌ರತ್ ಪೈಗಂಬರ್(ಸ)ರ ಧರ್ಮದ ನೆರವಿನಲ್ಲೂ ಅಬೂಬಕರ್ ಮತ್ತು ಉಮರ್ ರಝಿಯಲ್ಲಾಹು ಅನ್‌ಹುಮ್‌ರಂತೆ ನಾನು ಯಾರನ್ನೂ ಕಂಡಿಲ್ಲ. ಅಬೂಬಕರ್(ರ) ಮತ್ತು ಉಮರ್(ರ)ರ ಸತ್ಯಸಂಧತೆ ಮತ್ತು ನಿಷ್ಠೆಯ ವೈಭವ ಎಷ್ಟು ಉನ್ನತವಾಗಿತ್ತು! ಇಬ್ಬರೂ ಎಷ್ಟು ಅನುಗ್ರಹೀತ ಖಬರಿನಲ್ಲಿ ದಫನ್ ಆದರು ಎಂದರೆ, ಮೂಸಾ(ಅ) ಮತ್ತು ಈಸಾ(ಅ) ಜೀವಂತವಾಗಿರುತ್ತಿದ್ದರೆ, ನೂರುಪಟ್ಟು ಅಭಿಲಾಷೆಯೊಂದಿಗೆ ಅಲ್ಲಿ ದಫನ್ ಆಗಲು ಬಯಸುತ್ತಿದ್ದರು. ಆದರೆ ಈ ಸ್ಥಾನವು ಗೌರವಾನ್ವಿತನಾದ ಅಲ್ಲಾಹನ ಕಡೆಯಿಂದ ಒಂದು ಅನಂತವಾದ ಕೃಪೆಯಾಗಿದೆ. ಯಾರ ಕಡೆಗೆ ಅಲ್ಲಾಹನ ವರದಾನಗಳು ಅನಾದಿ ಕಾಲದಿಂದ ಮುಖಮಾಡಿ ಇವೆಯೋ ಅಂತಹ ಜನರ ಕಡೆಗೆ ಮಾತ್ರ ಅವು ಹೋಗುತ್ತವೆ. ಅಂತಹ ಜನರ ಮೇಲೆ ಕೊನೆಗೆ ಅಲ್ಲಾಹನ ಚಾದರಗಳು ಹೊದಿಸಲ್ಪಡುತ್ತವೆ.

ಹಝ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್‌ರತ್ ಪೈಗಂಬರ್(ಸ)ರ ನಂತರ ಇಸ್ಲಾಮಿಗೆ ಲಭಿಸಿದ ಎಲ್ಲವೂ ಈ ಮೂವರು ಖಲೀಫರಿಂದಲೇ ಲಭಿಸಿದ್ದುವು. ಹಝ್‌ರತ್ ಉಮರ್(ರ) ಮಾಡಿದ್ದೆಲ್ಲವೂ ಕಡಿಮೆಯೇನೂ ಅಲ್ಲವಾದರೂ ವಿಜಯದ ಹಳಿಯನ್ನು ಅಬೂಬಕರ್ ಸಿದ್ದೀಖ್ ರಝಿಯಲ್ಲಾಹು ಅನ್‌ಹುರವರೇ ಹಾಕಿದ್ದರು. ಸಿದ್ದೀಖ್(ರ) ರಸ್ತೆಯನ್ನು ಸ್ವಚ್ಛಗೊಳಿಸಿದರು. ಅದರ ಮೇಲೆ ಉಮರ್(ರ) ವಿಜಯಗಳ ಬಾಗಿಲುಗಳನ್ನು ತೆರೆದರು.

ಹಝ್‌ರತ್ ಮೌಲವಿ ಅಬ್ದುಲ್‌ಕರೀಂ ಸಾಹಿಬ್(ರ) ಹೇಳುತ್ತಾರೆ: ಒಂದು ಬಾರಿ ಒಬ್ಬ ಸಹೋದರ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ಸನ್ನಿಧಿಯಲ್ಲಿ ಹೀಗೆ ಹೇಳಿದರು: ಹಝ್‌ರತ್ ಅಬೂಬಕರ್(ರ) ಮತ್ತು ಹಝ್‌ರತ್ ಉಮರ್ ರಝಿಯಲ್ಲಾಹು ಅನ್‌ಹುರಿಗಿಂತ ನಿಮ್ಮನ್ನು ನಾವೇಕೆ ಪದವಿಯಲ್ಲಿ ಶ್ರೇಷ್ಠರೆಂದು ಭಾವಿಸಬಾರದು? ನಿಮ್ಮನ್ನು ಹಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ಥಾನಕ್ಕೆ ಸಮೀಪವಿರುವವರು ಎಂದೇಕೆ ಭಾವಿಸಬಾರದು? ಈ ಮಾತನ್ನು ಕೇಳಿ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಣ್ಣಗುಂದಿತು ಮತ್ತು ಅವರಲ್ಲಿ ಆಶ್ಚರ್ಯಕರವಾದ ವ್ಯಾಕುಲತೆ ಪ್ರಕಟವಾಯಿತು. ಅವರು ಆರು ಗಂಟೆಗಳಷ್ಟು ಸಮಯ ಪೂರ್ತಿಯಾಗಿ ಹಝ್‌ರತ್ ಪೈಗಂಬರ್(ಸ)ರ ಸ್ತುತಿಗಾನ ಮತ್ತು ಶ್ರೇಷ್ಠತೆಗಳು ಹಾಗೂ ತನ್ನ ದಾಸ್ಯ ಮತ್ತು ಕೆಳದರ್ಜೆಯ ಬಗ್ಗೆ, ಅದೇ ರೀತಿಯಲ್ಲಿ ಹಝ್‌ರತ್ ಅಬೂಬಕರ್(ರ) ಮತ್ತು ಹಝ್‌ರತ್ ಉಮರ್(ರ)ರ ಶ್ರೇಷ್ಠತೆಗಳ ಕುರಿತು ವಿವರಿಸುತ್ತಾ ಹೀಗೆ ಹೇಳಿದರು: ನಾನು ಅವರನ್ನು ಸ್ತುತಿಸುತ್ತೇನೆ ಮತ್ತು ನಾನು ಅವರ ಕಾಲುಗಳ ಧೂಳಾಗಿದ್ದೇನೆ ಎಂಬುದೇ ನನಗೆ ಹೆಮ್ಮೆಪಡಲು ಸಾಕು. ಅಲ್ಲಾಹನು ಅವರಿಗೆ ದಯಪಾಲಿಸಿದ ಶ್ರೇಷ್ಠತೆಯನ್ನು ಕೊನೆಗಾಲದ ವರೆಗೆ ಬೇರೆ ಯಾರೂ ಗಳಿಸಲು ಸಾಧ್ಯವಿಲ್ಲ. ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಯಾವಾಗ ಲೋಕದಲ್ಲಿ ಪುನಃ ಜನಿಸುವರು ಮತ್ತು

ಯಾರಿಗೆ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್‌ರಿಗೆ ಸೇವೆಮಾಡಲು ಲಭಿಸಿದಂತಹ ಸಂದರ್ಭಗಳು ಮತ್ತು ಅವಕಾಶಗಳು ಲಭಿಸಲು ಸಾಧ್ಯ?

(ಖುತ್‌ಬದ ಕೊನೆಯಲ್ಲಿ ಹುಝೂರ್ ಹೇಳಿದರು:) ಈ ಖುತ್ಬಗಳ ಪರಂಪರೆಯಲ್ಲಿ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಪ್ರಸ್ತಾಪ ಇಲ್ಲಿಗೆ ಸಮಾಪ್ತಿಗೊಂಡಿದೆ. ಇನ್ನು ಮುಂದೆ ಅಲ್ಲಾಹನು ತೌಫೀಕ್ ನೀಡಿದರೆ ಹಝ್ರತ್ ಅಬೂಬಕರ್(ರ)ರ ಪ್ರಸ್ತಾಪವನ್ನು ಆರಂಭಿಸುತ್ತೇನೆ. ಇನ್‌ಶಾ ಅಲ್ಲಾಹ್.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***

*At, Masjid Mubarak, Islamabad, Tilford, UK, On 26-11-2021*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**: khutuba.kannada@gmail.com*

**You can find all the Sermons archived at**: www.alislam.org/friday-sermon